**ಓ.ಎಸ್ ನಂಃ 07/21**

**ಪಿ.ಡಬ್ಲು–1**

ಸಾಕ್ಷಿಯನ್ನು ದಿನಾಂಕಃ 18.03.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದವರೆದ ಪಾಟೀ ಸವಾಲು ಃ– ವಾದಿ ಪರ ಶ್ರೀ. ಪಿ ಎಂ ಎಸ್ ವಕೀಲರಿಂದಃ**

ಪ್ರತಿವಾದಿಯ ನಿಮ್ಮಗೆ ತೊಂದರೆ ಪಡಿಸಿದ್ದೀರಾ ಎನ್ನಲಾದ ದಿನಾಂಕ ಯಾವುದು ಎಂದರೆ ನನಗೆ ಗೊತ್ತಿಲ್ಲ. ಯಾವ ದಿನಾಂಕದಿಂದು ಯಾವ ಪೋಲೀಸರಿಗೆ ದೂರು ನೀಡಿರುತ್ತೀರಾ ಎಂದರೆ ದಿನಾಂಕ ಗೊತ್ತಿಲ್ಲ. ಮುಳಬಾಗಿಲು ಗ್ರಾಮಾಂತರ ದೂರು ನೀಡಿರುತ್ತೇನೆ. ಪೊಲೀಸರಿಗೆ ದೂರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹೌದು. ನಿಪಿ 3 ರಲ್ಲಿ ಪ್ರತಿವಾದಿ ಹೆಸರು ಇದೆ ಎಂದರೆ ಸೃಷ್ಟಿಸಿಕೊಂಡಿರುತ್ತಾರೆ. ನಾನು ಪ್ರತಿವಾದಿ ವಿರುದ್ಧ ದಾವೆ ಹಾಕಿದ್ದೇನೆ ಎಂದರೆ ಸರಿ. ದಾವಾ ಆಸ್ತಿ 03.12.1986 ರಲ್ಲಿ ಪ್ರತಿವಾದಿ ಹೆಂಡತಿಗೆ ಕ್ರಯ ಪತ್ರ ಆಗಿರುತ್ತದೆ ಎಂದರೆ ಸೃಷ್ಟಿಸಿರುತ್ತಾರೆ. ಸದರಿ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ನನಗೆ ನೆನಪಿಲ್ಲ. ನಿಪಿ 4 ರಿಂದ 6 ಪಹಣಿಗಳಲ್ಲಿ ಪ್ರತಿವಾದಿ ಹೆಂಡತಿ ಹೆಸರು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಪ್ರತಿವಾದಿ ಹೆಂಡತಿ ಖರೀದಿ ಮಾಡಿದ್ದು ಆಕೆ ತೀರ ಕೊಂಡ ನಂತರ ಪ್ರತಿವಾದಿಯ ಹೆಸರಿಗೆ ಖಾತೆ ಆಗಿದ್ದು ಅವರ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ಕುಟುಂಬದವರು ಸ್ವಾಧೀನದಲ್ಲಿ ಇರುವ ಬಗ್ಗೆ ದಾಖಲೆ ನೀಡಿಲ್ಲ ಎಂದರೆ ಸರಿಯಲ್ಲ. 1986 ರಿಂದಲೂ ಪ್ರತಿವಾದಿ ಹಾಗೂ ಆಕೆ ಹೆಂಡತಿ ಸ್ವಾಧೀನ ಇದ್ದು ಅದಕ್ಕೆ ಕಂದಾಯ ಕಟ್ಟಿರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಿಮ್ಮ ವಂಶಸ್ಥರೆ ಪ್ರತಿವಾದಿ ಹೆಂಡತಿಗೆ ಕ್ರಯ ಪತ್ರದ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ವಿರುದ್ಧ ಸುಳ್ಳು ದಾವೆ ಹಾಕಿ ಸುಳ್ಳು ಹಾಕುತ್ತಿದೇನೆ ಎಂದರೆ ಸರಿಯಲ್ಲ.

ದಾವಾ ಐಟಂ ನಂ,2 ರಲ್ಲಿ ಎಷ್ಟುನ್ನು ಪ್ರತಿವಾದಿಯ ಹೆಂಡತಿಗೆ ಮಾರಾಟ ಮಾಡಲಾಗಿದೆ ಎಂದರೆ 30 ಇಂಟು 40 ಅಡಿ. ಉಳಿದಿರುವ ವಿಸ್ತೀರ್ಣ ನಮ್ಮಗೆ ಸೇರಿರುತ್ತದೆ. ಉಳಿದಿರುವ ಜಾಗ ಹಾಗೂ ಅದು ನಿಮ್ಮ ಹೆಸರಿನಲ್ಲಿ ದಾಖಲೆ ನೀಡಿದ್ದೀರಾ ಎಂದರೆ ಹೌದು. ಉಳಿದಿರುವ ವಿಸ್ತೀರ್ಣ ಎಷ್ಟು ಎಂದರೆ ನನಗೆ ನೆನಪಿಲ್ಲ. ಸದರಿ ಉಳಿದಿರುವ ಜಾಗ ಚೆಕ್ಕು ಬಂದಿ ಪೂಃ ಕ್ಕೆ ರಸ್ತೆ. ಪಃಕ್ಕೆ ಕೃಷ್ಣಯ್ಯ ಶೆಟ್ಟಿ, ಉಃ ಕ್ಕೆ ಲಾಲ್‌ನ ಸಾಬೀ ಮತ್ತು ದಃ ಭಾಷಾ ಸಾಬೀ ಇರುತ್ತಾರೆ. ಮೇಲೆ ಹೇಳಿದ ಆಸ್ತಿಯ ಆಸ್ಸೆಸ್‌ಮೆಂಟ್ ನಂ. ಹಾಗೂ ಖಾತಾ ನಂ ಏನು ಎಂದರೆ 17. ದಾವಾ ಐಟಂ ನಂ 2 ರ ದಾಖಲೆ ಗಳ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹೌದು. ದಾವ ಆಸ್ತಿಗಳು ನಿಮ್ಮಗೆ ಯಾವುದೇ ಹಕ್ಕು ಇಲ್ಲ ಎಂದರೇ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಪ್ರತಿವಾದಿ ಹಾಗೂ ಅವರ ಕುಟುಂಬದವರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನಿಡಿ 1 ನ್ನು ಸೃಷ್ಟಿಸಿಕೊಂಡಿರುತ್ತೇನೆ

ಎಂದರೆ ಸರಿಯಲ್ಲ.ದಾವಾ ಆಸ್ತಿಯನ್ನು ಹೊಡೆಯುವ ಉದ್ದೇಶದಿಂದ ಸುಳ್ಳು ದಾವೆ ಸುಳ್ಳು ಸಾಕ್ಷಿ ನುಡಿಯುತ್ತಿದೆನೆಂದರೆ ಸರಿಯಲ್ಲ. ನಿಪಿ 14 ನ್ನು ಸಹ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ-**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ)***

**ಓದಿ ಹೇಳಿ ಕೇಳಿ ಸರಿ ಇದೆ,**

**ಸಹಿ/-**
***(ಹರೀಶ್. ಜಿ )***
**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಮತ್ತು ಜೆಎಂಎಫ್ ಸಿ, ಮುಳಬಾಗಿಲು**